ಖ) ಬೇಲೂರು ತಾಲ್ಲೂಕಿನಲ್ಲಿ ಬರುವ ಈ ಕೆಳಕಂಡ ಗ್ರಾಮದ ರೈತರುಗಳಿಗೆ ಪರಿಹಾರ ಧನ ಬಾಕಿ ಇರುತ್ತದೆ.

		ಎ.ಗುಂ.
1)	ಬೆಳಗುಲಿ	25.39
2)	ಬಿಕ್ಕೋಡು	10.00
3)	ಹೊನ್ನವಳ್ಳಿ	4.00
4)	ಚಟ್ಟನಹಳ್ಳಿ	1.00
5)	ಮದಘಟ್ಟ	1.28
6)	ಹೊನ್ನೇಮನೆ	12.00
7)	ಹೊನ್ನವಳ್ಳಿ	ಗ್ರಾಮಠಾಣೆ
8)	ನಡುವನಹಳ್ಳಿ	2.10

ಒಟ್ಟು 56 ಎಕರೆ 37 ಗುಂಟೆ ಭೂಮಿಗೆ ಪರಿಹಾರ ಕೊಡಬೇಕಾಗಿರುತ್ತದೆ.

ಯಗಚಿ ಮುಳುಗಡೆ ಪ್ರದೇಶದ ಜನರಿಗೆ ಕಾಲೋನಿಗಳನ್ನು ಕಟ್ಟಿಸುವುದು

196-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ಜಲಾಶಯ ಯೋಜನೆಯಿಂದಾಗಿ ಮುಳುಗಡೆಯಾಗಿರುವ ಭೂಮಿ ಎಷ್ಟು ಹಾಗೂ ಎಷ್ಟು ಎಕರೆ ಪ್ರದೇಶಕ್ಕೆ ಈವರೆಗೆ ಪರಿಹಾರ ಕೊಡಲಾಗಿದೆ;

ಆ) ಯಗಚಿ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ಮಾಡಲಾಗಿದೆಯೇ;

ಇ) ಯಾವ ಯಾವ ಪುನರ್ವಸತಿ ಕಾಲೋನಿಯ ಹತ್ತಿರ ಎಷ್ಟೆಷ್ಟು ಭೂಮಿ ಮೀಸಲಿಟ್ಟಿದೆ. ಹಾಗೂ ಎಷ್ಟು ಜನರಿಗೆ ಎಷ್ಟು ಎಕರೆ ಭೂಮಿ ಈವರೆಗೆ ಮಂಜೂರ್ಮಾಡಲಾಗಿದೆ;

ಈ) ಯಗಚಿ ಅಣೆಕಟ್ಟು ನಾಲಾ ಹೋಗಿ ಆ ಪ್ರದೇಶದ ಜನರು ಎಷ್ಟು ಎಕರೆ ಭೂಮಿ ಕಳೆದುಕೊಂಡಿರುವರು ಹಾಗೂ ಅವರಿಗೆ ಪರಿಹಾರ ಕೊಡಲಾಗಿದೆಯೆ;

ಉ) ಅವರುಗಳಿಗೆ ಭೂಮಿ ಮಂಜೂರಾತಿ ಕೊಡಲಾಗಿದೆಯೆ ;

ಊ) ಹಾಗಿದ್ದಲ್ಲಿ, ಎಷ್ಟು ಎಕರೆ ಕೊಡಲಾಗಿದೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಯಗಚಿ ಅಣೆಕಟ್ಟು ಪೂರ್ಣಗೊಂಡ ನಂತರ ಜಲಾಶಯದಡಿ 4846 ಎಕರೆಯಷ್ಟು ಪ್ರದೇಶ ಮುಳುಗಡೆಯಾಗುತ್ತದೆ. 1994 ಎ, 33 ಗುಂಟೆ ಪ್ರದೇಶಕ್ಕೆ ರೂ. 308.70 ಲಕ್ಷಗಳ ಪರಿಹಾರ ಧನ ನೀಡಲಾಗಿದೆ.

ಆ) ಯಗಚಿ ಯೋಜನೆ ಅಣೆಕಟ್ಟು ಮುಳುಗಡೆ ಪ್ರದೇಶದ ಜನರಿಗೆ ಪುನರ್ವಸತಿ ಕಾಲೋನಿಗಳನ್ನು ಕಟ್ಟಿರುವಲ್ಲಿ ಅವರಿಗೆ ಭೂಮಂಜೂರಾತಿ ನೀಡುವ ಬಾಬ್ತು 597 ಪ್ರಕರಣಗಳಿಗೆ ಸಂಬಂಧಿಸಿದಂತೆ 2351 ಎಕರೆ ಜಮೀನು ಮಂಜೂರಾತಿ ಮಾಡಲಾಗಿದ್ದು, ಜನವರಿ 1994ರ ಅಂತ್ಯದವರೆಗೆ 525 ಪ್ರಕರಣಗಳಿಗೆ ಸಂಬಂಧಿಸಿದಂತೆ ಎ 2064-19 ಗುಂ. ಪ್ರದೇಶಕ್ಕೆ ಸಾಗುವಳಿ ಚೀಟಿಯನ್ನು ನೀಡಲಾಗಿದೆ.

ಕ್ರ. ಸಂಖ್ಯೆ(1)	ಮುಳುಗಡೆ ಗ್ರಾಮ(2)	ಪುನರ್ವಸತಿ ಕೇಂದ್ರ(3)	ವ್ಯಕ್ತಿಗಳ ಸಂಖ್ಯೆ(4)
1)	ಸೂರಾಪುರ	ಹೀರುಗುಪ್ಪೆ	39
		ಹಾರೋಹಳ್ಳಿ	62
2)	ಶಂಬುಗನಹಳ್ಳಿ	ಚಿಕ್ಕೋಲೆ	41
3)	ಮುಂಡಗಟ್ಟ	ಬೆಳ್ಳೂರು	49
4)	ಡಣ್ಣಾಯಕನಹಳ್ಳಿ	ಹಾಡ್ಲಗೆರೆ	75
5)	ಕನ್ನಾಯಕನಹಳ್ಳಿ	ಮದಗಟ್ಟ	4

ವಿಸ್ತೀರ್ಣ ಎ(6)ಗುಂ.	ಮೀಸಲಿಟ್ಟ ಜಮೀನು ಎ. (7) ಗುಂ.
156-00	355-00
248-00	337-00
164-00	514-00
196-00	284-00
300-00	411-00
16-00	445-00

ಈ) ನಾಲೆಗಾಗಿ ಒಟ್ಟಾರೆ 115 ಎ, 20 ಗುಂಟೆ ಭೂಮಿಯನ್ನು 135 ಜನರು ಕಳೆದುಕೊಂಡಿದ್ದು ಈ ಬಾಬ್ತಿಗೆ ರೂ. 15,32,862ಗಳನ್ನು ಪರಿಹಾರ ಧನ ಪಾವತಿಬೇಕಾಗಿರುತ್ತದೆ.

ಉ) ನಾಲೆಗೆ ಭೂಮಿ ಕಳೆದುಕೊಂಡವರಿಗೆ ಭೂಸ್ವಾಧೀನ ಕಾಯಿದೆಯನ್ವಯ ಬದಲಿ ಜಮೀನು ಮಂಜೂರು ಮಾಡುವುದಕ್ಕೆ ಅವಕಾಶವಿರುವುದಿಲ್ಲ.

ಊ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯ ರಸ್ತೆಗಳ ದುರಸ್ತಿ

193 - ಶ್ರೀ ಬಿ.ಪಿಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ವಾರ್ಷಿಕ ದುರಸ್ತಿಗಾಗಿ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಬಿಡುಗಡೆ ಮಾಡಿರುವ ಹಣವೆಷ್ಟು;*

ಆ) *ಮಲೆನಾಡು ತಾಲ್ಲೂಕಾದ ಬೇಲೂರು ರಸ್ತೆಗಳು ಮಳೆಗಾಲದಲ್ಲಿ ನೀರು ನುಗ್ಗಿ ಮಣ್ಣು ತಾರು ರಸ್ತೆಯ ಎರಡು ಬದಿಯಲ್ಲಿ ಕೊಚ್ಚಿ ಹೋಗುವುದರಿಂದ ಎರಡು ಕಡೆ ಜೆಲ್ಲಿ ಕಲ್ಲು ಹಾಕಿಸಿ ಚರಂಡಿ ಮಾಡಿಸುವುದು ಸೂಕ್ತವಲ್ಲವೆ;*

ಇ) *ಕಳೆದ 3 ವರ್ಷಗಳಿಂದ ಬೇಲೂರು ತಾಲ್ಲೂಕಿನಲ್ಲಿ ಎಷ್ಟು ಕಿ.ಮೀಟರ್ ಉದ್ದ ರಸ್ತೆ ಬದಿಗೆ ಜೆಲ್ಲಿ ಕಲ್ಲು ಹಾಕಿಸಲಾಗಿದೆ. ಹಾಗೂ ಎಷ್ಟು ಕಿಲೋಮೀಟರ್ ಉದ್ದಕ್ಕೆ ಚರಂಡಿ ತೋಡಿಸಲಾಗಿದೆ?*